ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 08 ಎಟಿಎಸ್[1] 2018

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 22/10/2018.

**ಸುತ್ತೋಲೆ**

ವಿಷಯ:- ಬಿ.ಇ ಮತ್ತು ಡಿಪ್ಲೋಮಾ ಅಭ್ಯರ್ಥಿಗಳಿಗೆ ಒಂದು ವರ್ಷದ ಶಿಶಿಕ್ಷು ತರಬೇತಿ ನೀಡಲು ಸಂದರ್ಶನವನ್ನು ತಮ್ಮ ಸಂಸ್ಥೆಯಲ್ಲಿ ನಡೆಸುವ ಕುರಿತು.

-***-

ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಪ್ರಾದೇಶಿಕ ಶಿಶಿಕ್ಷು ತರಬೇತಿ ಮಂಡಳ(Board Of Apprenticeship Training), ಚೆನ್ನೈ ಇವರ ಸಹಯೋಗದೊಂದಿಗೆ **ದಿನಾಂಕ: 26/10/2018** ರಂದು ಬೆಳಗ್ಗೆ 9-30 ರಿಂದ ಸಂಜೆ 5-30 ರವರೆಗೆ ಎಂ.ಎಸ್.ರಾಮಯ್ಯ ಪಾಲಿಟೆಕ್ನಿಕ್,ಬೆಂಗಳೂರು ಇಲ್ಲಿ ಅಪ್ರೆಂಡಿಶಿಪ್ ಮೇಳವನ್ನು Apprenticeship (Fair) ಆಯೋಜಿಸಲಾಗಿದೆ.

ಶಿಶಿಕ್ಷು ತರಬೇತಿ ಅಧಿನಿಯಮ ಅಪ್ರೆಂಟಿಸ್ ಆಕ್ಟ್ 1961ರ (1973 & 1986 ರ ತಿದ್ದುಪಡಿ) ಪ್ರಕಾರ ತರಬೇತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಬಿ.ಇ. ಮತ್ತು ಡಿಪ್ಲೋಮಾ ಕೋರ್ಸ್‌ಗಳಲ್ಲಿ ಉತ್ತೀರ್ಣರಾಗಿ 3 ವರ್ಷ 3 ತಿಂಗಳ ಅವಧಿಯೊಳಗೆ ಒಂದು ವರ್ಷದ ಶಿಶಿಕ್ಷು ತರಬೇತಿಯನ್ನು ವಿವಿಧ ಸರ್ಕಾರಿ/ಖಾಸಗಿ ಒಡೆತನದ ಉದ್ದಿಮೆ/ಕೈಗಾರಿಕೆ ಸಂಸ್ಥೆಗಳಲ್ಲಿ ಪಡೆಯಲು ಅವಕಾಶ ಮಾಡಲಾಗಿದೆ.

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ(MHRD) ಅಡಿಯಲ್ಲಿ ಒಂದು ವರ್ಷದ ಶಿಶಿಕ್ಷು ತರಬೇತಿಯನ್ನು ವಿವಿಧ ಕಾರ್ಖಾನೆ/ಕೈಗಾರಿಕೆಗಳಲ್ಲಿ ತರಬೇತಿ ನೀಡುವ ಸಂಬಂಧ, 40ಕ್ಕೂ ಹೆಚ್ಚು ಸರ್ಕಾರಿ/ಖಾಸಗಿ ಕಾರ್ಖಾನೆ/ ಕೈಗಾರಿಕಾ ಕಂಪನಿಗಳು ಪಾಲ್ಗೊಳ್ಳಲಿವೆ.

ಈ ಕಾರ್ಯಕ್ರಮಕ್ಕೆ ಭಾಗವಹಿಸುವ ಬಿ.ಇ. ಮತ್ತು ಡಿಪ್ಲೋಮಾ ಅಭ್ಯರ್ಥಿಗಳು **www.mhrdnats.gov.in** ನಲ್ಲಿ ನೊಂದಣಿ ಮಾಡಿ ಬಾಗವಹಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಜಂಟಿ ನಿರ್ದೇಶಕರು(ಎಟಿಎಸ್)